936 (580) ಶ್ರೀ ಪಾಟೀಲ್ ಎಸ್ ಎಸ್ (ಮುಂಡರಗಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ದೇವದಾಸಿ ಪದ್ಧತಿ ನಿಯಂತ್ರಣ ಕಾಯ್ದೆ ಎಂದಿನಿಂದ ಜಾರಿಗೆ ಬಂದಿದೆ,

ಆ) ಕಾಯ್ದೆ ಜಾರಿಗೆ ಬಂದ ನಂತರ ದೇವದಾಸಿಯರಾದ ಮತ್ತು ಅದಕ್ಕೆ ಪ್ರೋತ್ಸಾಹಿಸಿದವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ, (ವಿವರ ನೀಡುವುದು)

ಇ) ದೇವದಾಸಿ ಪದ್ಧತಿ ಸಂಪೂರ್ಣವಾಗಿ ನಿಂತಿದೆಯೇ,

ಈ) ಹಾಗಿಲ್ಲದಿದ್ದಲ್ಲಿ, ಅದನ್ನು ನಿಲ್ಲಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ದೇವದಾಸಿ ಪದ್ಧತಿ ನಿರ್ಮೂಲನೆಗಾಗಿ ಕರ್ನಾಟಕ ದೇವದಾಸಿ (ಸಮರ್ಪಣೆ ನಿಷೇಧ) ಅಧಿನಿಯಮ, 1982 ದಿನಾಂಕ 31-1-1984ರಿಂದ ಜಾರಿಗೆ ಬಂದಿದೆ ಮತ್ತು ಈ ಕಾಯಿದೆ ಮೇಲಿನ ಕರ್ನಾಟಕ ದೇವದಾಸಿಯರ (ಸಮರ್ಪಣೆ ನಿಷೇಧ) ನಿಯಮಗಳು 1988 ದಿನಾಂಕ 26-9-1988ರಿಂದ ಜಾರಿಗೆ ಬಂದಿದೆ

ಆ) ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ 1991ನೇ ಸಾಲಿನಿಂದ ಬೆಳಗಾವಿ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಮತ್ತು 2004-05ನೇ ಸಾಲಿನಿಂದ ಬಳ್ಳಾರಿ, ಕೊಪ್ಪಳ, ರಾಯಚೂರು, ಗುಲ್ಬರ್ಗಾ, ಹಾವೇರಿ, ಗದಗ್ ಮತ್ತು ಧಾರವಾಡ ಜಿಲ್ಲೆಗಳಲ್ಲಿ ದೇವದಾಸಿ ಪುನರ್‌ವಸತಿ ಯೋಜನೆಯನ್ನು (ಒಟ್ಟು ಹತ್ತು ಜಿಲ್ಲೆಗಳಲ್ಲಿ) ಅನುಷ್ಠಾನಗೊಳಿಸಲಾಗುತ್ತಿದೆ ಸದರಿ ಸಮರ್ಪಣೆ ನಿಷೇಧ ಅಧಿನಿಯಮದ ಅಂಶಗಳನ್ನು ಜನಜಾಗೃತಿ ಕಾರ್ಯಕ್ರಮಗಳ ಮೂಲಕ, ಜಾತ್ರಾ ಜಾಗೃತಿ ಕಾರ್ಯಕ್ರಮಗಳು ಹಾಗೂ ಬೀದಿ ನಾಟಕಗಳ ಮೂಲಕ ಪರಿಣಾಮಕಾರಿಯಾಗಿ ಪ್ರಚಾರ ಮಾಡಲಾಗುತ್ತಿದೆ

ಈ ಕಾಯ್ದೆಯಡಿಯಲ್ಲಿ ತಪ್ಪಿತಸ್ಥರ ಮೇಲೆ 45 ಮೊಕದ್ದಮೆಗಳನ್ನು ಈವರೆಗೆ ಹೂಡಲಾಗಿದೆ ಈ ಪೈಕಿ ಮೊಕದ್ದಮೆ ಸಂಖ್ಯೆ ಸಿ ಸಿ ನಂ 1739/2003ರಲ್ಲಿ 14 ವರ್ಷದ ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ದೇವದಾಸಿ

ಪದ್ಧತಿಗೆ ಸಮರ್ಪಣೆ ಮಾಡಿದ ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲ್ಲೂಕಿನ ಶಿವಾಪುರ ಗ್ರಾಮದ 3 ಜನ ಆರೋಪಿಗಳಿಗೆ ಕ್ರಮವಾಗಿ ಎರಡು ವರ್ಷ ಸಜೆ, ರೂ 2000/– ದಂಡ ಹಾಗೂ ಒಂದು ವರ್ಷ ಸಜೆ ರೂ 1000/– ದಂಡ ವಿಧಿಸಿ ನ್ಯಾಯಾಲಯ ತೀರ್ಪು ನೀಡಿರುತ್ತದೆ

ಇ) ದೇವದಾಸಿ ಪದ್ಧತಿಯನ್ನು ಸಂಪೂರ್ಣವಾಗಿ ತಡೆಗಟ್ಟಲು ಎಲ್ಲಾ ರೀತಿಯ ಕ್ರಮಗಳನ್ನು ವಹಿಸಲಾಗುತ್ತಿದೆ ಸಮೀಕ್ಷೆ ಪ್ರಕಾರ ಬೆಳಗಾವಿ ಜಿಲ್ಲೆಯಲ್ಲಿ ಗುರುತಿಸಲಾದ 3600 ದೇವದಾಸಿ ಮಹಿಳೆಯರ ಪುನರ್‌ವಸತಿ ಕಾರ್ಯಕ್ರಮವನ್ನು ನಿಗಮವು ಮುಕ್ತಾಯಗೊಳಿಸಿದ್ದು, ಪುನರ್‌ವಸತಿಗೊಂಡ ಮಾಜಿ ದೇವದಾಸಿ ಮಹಿಳೆಯರು ಮಹಿಳಾ ಅಭಿವೃದ್ಧಿ ಮತ್ತು ಸಂರಕ್ಷಣಾ ಸಂಸ್ಥೆ (MASS)ಯನ್ನು ಸ್ಥಾಪಿಸಿಕೊಂಡು ಬೆಳಗಾವಿ ಹಾಗೂ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಈ ಪದ್ಧತಿಯ ನಿರ್ಮೂಲನೆಗಾಗಿ ನಿರ್ದಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಂಡು ಶ್ರಮಿಸುತ್ತಿದ್ದಾರೆ ರಾಜ್ಯ ಸರ್ಕಾರವು ಆರ್ಥಿಕ ಬೆಂಬಲದ ರೂಪದಲ್ಲಿ ಈ ಸಂಸ್ಥೆಗೆ ವರ್ಷಕ್ಕೆ ರೂ 12 00 ಲಕ್ಷಗಳನ್ನು ನೀಡುತ್ತಿದ್ದು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಸಹ ಸಂಸ್ಥೆಯಾಗಿ ಮಾಸ್ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ ಇದೇ ರೀತಿ ಬಿಜಾಪುರ ಜಿಲ್ಲೆಯಲ್ಲಿ ಅಕ್ಕಮಹಾದೇವಿ ಜಿಲ್ಲಾ ಮಟ್ಟದ ಮಹಿಳಾ ಸಂಸ್ಥೆಯನ್ನು ಸೊಸೈಟಿ ಕಾಯ್ದೆಯಡಿ ನೊಂದಾಯಿಸಲ್ಪಟ್ಟಿದ್ದು, ಈ ಪದ್ದತಿಯು ಮರುಕಳಿಸದಂತೆ ನಿಗಾವಹಿಸಲಾಗುತ್ತಿದೆ

ಈ) ದೇವದಾಸಿ ಪದ್ಧತಿಯನ್ನು ಸಂಪೂರ್ಣವಾಗಿ ತಡೆಗಟ್ಟಲು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಹಲವಾರು, ಸಾಮಾಜಿಕ ಮತ್ತು ಆರ್ಥಿಕ ಕಾರ್ಯಕ್ರಮಗಳನ್ನು ದೇವದಾಸಿ ಪುನರ್ ವಸತಿ ಕಾರ್ಯಕ್ರಮದ ಅಡಿಯಲ್ಲಿ ಹಮ್ಮಿಕೊಂಡು ಅನುಷ್ಠಾನಗೊಳಿಸುತ್ತಿದೆ

1 ಜನಜಾಗೃತಿ ಕಾರ್ಯಕ್ರಮ
2 ಜಾತ್ರೆಗಳಲ್ಲಿ ಜಾಗೃತಿ ಕಾರ್ಯಕ್ರಮ
3 ಆರೋಗ್ಯ ತಪಾಸಣೆ ಶಿಬಿರ
4 ಸ್ವಸಹಾಯ ಗುಂಪುಗಳ ರಚನೆ
5 ಆದಾಯ ಉತ್ಪನ್ನಕರ ಚಟುವಟಿಕೆಯಲ್ಲಿ ತೊಡಗಲು ಬ್ಯಾಂಕ್‌ಗಳು ನೀಡುವ ಸಾಲದ ಮೇಲೆ ನಿಗಮದಿಂದ ಶೇಕಡಾ 60ರಷ್ಟು ಸಹಾಯಧನ ನೀಡಲಾಗುತ್ತಿದೆ

6 ಸರ್ಕಾರದ ಇತರೆ ಇಲಾಖೆಗಳಿಂದ ಸಿಗುವ ಸೌಲಭ್ಯಗಳಾದ ಪಡಿತರ ಚೀಟಿ ವಸತಿ ಮತ್ತು ನಿವೇಶನ ಇತ್ಯಾದಿಗಳನ್ನು ಒದಗಿಸಿಕೊಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ

7 ಸಮೀಕ್ಷೆಯಲ್ಲಿ ಗುರುತಿಸಲಾಗಿರುವ ದೇವದಾಸಿ ಮಹಿಳೆಯರಿಗೆ ಮಾಸಾಶನ ಬಗ್ಗೆ ಪರಿಶೀಲಿಸಲಾಗುತ್ತಿದೆ

938 (576) ಶ್ರೀ ಕೆ ಪ್ರಭಾಕರ ಬಂಗೇರ (ಬೆಳ್ತಂಗಡಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ,

ಅ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಜಾರಿಗೊಳಿಸಿದ ವಿವಿಧ ಯೋಜನೆಗಳಾವುವು ಹಾಗೂ ಎಷ್ಟು ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯವನ್ನು ತಲುಪಿಸಲಾಗಿದೆ, (ತಾಲ್ಲೂಕುವಾರು ಮಾಹಿತಿ ಒದಗಿಸುವುದು),

ಆ) ಮಹಿಳೆಚಿುರು ಆರ್ಥಿಕ ಸ್ವಾವಲಂಬನೆಚಿುನ್ನು ಸಾಧಿಸಲು ಹಮ್ಮಿಕೊಂಡ ಯೋಜನೆಗಳಾವುವು,

ಇ) ಶೈಕ್ಷಣಿಕ ಮುನ್ನಡೆಗಾಗಿ ಇಲಾಖೆಯು ಯಾವ ಪ್ರೋತ್ಸಾಹಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ?

ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ವಿವರವನ್ನು ಅನುಬಂಧದಲ್ಲಿ ಒದಗಿಸಿದೆ

ಆ) 1 ಸ್ತ್ರೀಶಕ್ತಿ ಯೋಜನೆ

2 ಸ್ತ್ರೀಶಕ್ತಿ ಗುಂಪುಗಳ ಉತ್ಪನ್ನಗಳಿಗೆ ಮಾರುಕಟ್ಟೆ ಸೌಲಭ್ಯ

3 ಉದ್ಯೋಗಿನಿ ಯೋಜನೆ

4 ಮಹಿಳಾ ತರಬೇತಿ ಕಾರ್ಯಕ್ರಮ

5 ಮಾರುಕಟ್ಟೆ ನೆರವು ಯೋಜನೆ

6 ರಾಜ್ಯಸಂಪನ್ಮೂಲ ಕೇಂದ್ರ (ಮಹಿಳಾ ಸ್ವ-ಉದ್ಯೋಗ ಮಾರ್ಗದರ್ಶನ ಕೇಂದ್ರ)

ಇ) 1) 3 ರಿಂದ 6 ವರ್ಷದ ಮಕ್ಕಳಿಗೆ ಅಂಗನವಾಡಿ ಕೇಂದ್ರಗಳ ಮೂಲಕ ಶಾಲಾಪೂರ್ವ ಶಿಕ್ಷಣವನ್ನು ನೀಡಲಾಗುತ್ತಿದೆ ಹಾಗೂ 15-45